## ನಿಮ್ಮೊಡನೆ

# ವೈದ್ಯಕೀಯ ಚರಿತ್ರೆಯ ಕಪ್ಪುಕಲೆ

ಐರ್ಲೆಂಡ್‌ನಲ್ಲಿನ ಗರ್ಭಪಾತ ಕಾನೂನಿನ ತೊಡಕುಗಳ ಕುರಿತ ಚರ್ಚೆ ಇದು ಮೊದಲನೆಯದ್ದೇನಲ್ಲ. 2005ರಲ್ಲಿ ಗರ್ಭಪಾತದ ನಿರಾಕರಣೆಗೆ ಒಳಗಾದ ಮೂವರು ಮಹಿಳೆಯರು ತಮ್ಮ ಮಾನವ ಹಕ್ಕುಗಳ ಹರಣ ಆಗಿದೆಯೆಂದು ಕಾನೂನು ಹೋರಾಟ ನಡೆಸಿದ್ದರು. ಈ ದನಿಗೆ ಬಲ ಬಂದಿದ್ದು 1992ರಲ್ಲಿ.

ಬೆಳಗಾವಿಯ ದಂತವೈದ್ಯೆ ಸವಿತಾ ಹಾಲಪ್ಪನವರ ದಾರುಣ ಸಾವು (ಅ.28) ಮಾನವೀಯತೆಯ ಕುರಿತಾದ ನಂಬಿಕೆಗಳನ್ನು ಅಲುಗಾಡಿಸುವಂತಹದ್ದು. ಕೊಲೆ, ಸುಲಿಗೆ, ಅತ್ಯಾಚಾರದ ಅಮಾನುಷ ಕೃತ್ಯಗಳು ದೈನಿಕದ ಭಾಗ ಎನ್ನುವಂತೆ ವರದಿ ಆಗುತ್ತಿರುವ ಸಂದರ್ಭದಲ್ಲಿ, ಸಾವು ನೋವುಗಳ ಕುರಿತಂತೆ ನಮ್ಮ ಸಂವೇದನೆ ಜಡವಾಗಿರುವುದು ನಿಜ. ಆದರೆ, ಐರ್ಲೆಂಡ್‌ನಲ್ಲಿ ಸಂಭವಿಸಿರುವ ಸವಿತಾ ಅವರ ಸಾವು ಎಂಥ ಜಡ ಮನಸ್ಸಿನವರನ್ನೂ ತಲ್ಲಣಗೊಳಿಸುವಂತಹದ್ದು. ರಕ್ಷಿಸಬೇಕಾದ ವೈದ್ಯರೇ ಧಾರ್ಮಿಕ ಕೈಕೋಳಗಳನ್ನು ತೊಟ್ಟು ಸವಿತಾ ಸಾವಿಗೆ ಮೂಕಪ್ರೇಕ್ಷಕರಾಗಿ ನಿಂತದ್ದನ್ನು ಕಲ್ಪಿಸಿಕೊಳ್ಳುವುದೇ ಅಸಹನೀಯ.

ವಿಪರೀತ ರಕ್ತಸ್ರಾವದಿಂದಾಗಿ ನಿತ್ರಾಣರಾದ ಸವಿತಾ ಅವರ ಗರ್ಭಪಾತದ ಕೋರಿಕೆಯನ್ನು ವೈದ್ಯರು ಧಾರ್ಮಿಕ ಕಾರಣದಿಂದಾಗಿ ತಳ್ಳಿ ಹಾಕಿದ್ದಾರೆ. ಕ್ಯಾಥೊಲಿಕ್ ದೇಶವಾದ ಐರ್ಲೆಂಡ್‌ನಲ್ಲಿ ಗರ್ಭಪಾತಕ್ಕೆ ಅವಕಾಶವಿಲ್ಲ ಎನ್ನುವುದು ವೈದ್ಯರ ವಾದ. ಈ ತರ್ಕ, ಎಂಥ ಸ್ಥಿತಿಯಲ್ಲೂ ರೋಗಿಯ ಹಿತವನ್ನು ಕಾಯಬೇಕಾದ ವೈದ್ಯ ಧರ್ಮಕ್ಕೆ ವಿರುದ್ಧವಾದುದು. ರೋಗಿಯ ಮಾತನ್ನು ಅಂತಿಮವಾಗಿ ವೈದ್ಯ ಪಾಲಿಸಬೇಕು ಎನ್ನುತ್ತದೆ ವೈದ್ಯಶಾಸ್ತ್ರ. ಬಣ್ಣ, ಭಾವ, ಧರ್ಮ, ದೇವರು ಎಲ್ಲವನ್ನೂ ಮೀರಿ ರೋಗಿಯನ್ನು ಉಪಚರಿಸು ಎಂದೂ ವೈದ್ಯ ಧರ್ಮ ಹೇಳುತ್ತದೆ. ಆ ಕಾರಣದಿಂದಲೇ ವೈದ್ಯಕೀಯ ಪಠ್ಯದಲ್ಲಿ ಯಾವ ಧರ್ಮದ ಉಲ್ಲೇಖಗಳಿಗೂ ಆಸ್ಪದವಿಲ್ಲ. ಈ ಎಲ್ಲ ಆದರ್ಶಗಳೂ ಸವಿತಾ ಅವರ ಸಂದರ್ಭದಲ್ಲಿ ಗಾಳಿಪಾಲಾಗಿದೆ. ಈ ದುರಂತ ಆಧುನಿಕ ವೈದ್ಯಕೀಯ ಚರಿತ್ರೆಯ ಒಂದು ಕಪ್ಪುಕಲೆಯಾಗಿ ಪರಿಣಮಿಸಿದೆ.

ಐರ್ಲೆಂಡ್‌ನಲ್ಲಿನ ಗರ್ಭಪಾತ ಕಾನೂನಿನ ತೊಡಕುಗಳ ಕುರಿತ ಚರ್ಚೆ ಇದು ಮೊದಲನೆಯದ್ದೇನಲ್ಲ. 2005ರಲ್ಲಿ ಗರ್ಭಪಾತದ ನಿರಾಕರಣೆಗೆ ಒಳಗಾದ ಮೂವರು ಮಹಿಳೆಯರು ತಮ್ಮ ಮಾನವ ಹಕ್ಕುಗಳ ಹರಣ ಆಗಿದೆಯೆಂದು ಕಾನೂನು ಹೋರಾಟ ನಡೆಸಿದ್ದರು. ಈ ದನಿಗೆ ಬಲ ಬಂದಿದ್ದು 1992ರಲ್ಲಿ. ಅತ್ಯಾಚಾರಕ್ಕೆ ಒಳಗಾದ 14 ವರ್ಷದ ಬಾಲಕಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಶತಮಾನಕ್ಕೂ ಹೆಚ್ಚು ಕಾಲ ಕಠಿಣವಾಗಿ ಪಾಲಿಸಿಕೊಂಡು ಬಂದಿದ್ದ ಗರ್ಭಪಾತ ಕಾಯ್ದೆಯ ಮರು ಪರಿಶೀಲನೆಗೆ ಕಾರಣವಾಯಿತು. ತಾಯಿಯ ಜೀವಕ್ಕೆ ಅಪಾಯವಿದ್ದ ಸಂದರ್ಭದಲ್ಲಿ ಗರ್ಭಪಾತ ಮಾಡಲಿಕ್ಕೆ ಐರ್ಲೆಂಡ್‌ನ ಸಂವಿಧಾನದಲ್ಲಿ ಅವಕಾಶ ಇರುವುದನ್ನು ಎತ್ತಿ ತೋರಿಸಿದ ಐರಿಷ್ ಸುಪ್ರೀಂ ಕೋರ್ಟ್, ಸಂವಿಧಾನ ನೀಡಿದ ಹಕ್ಕನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಟೀಕಿಸಿತು. ಇದಾದ ಇಪ್ಪತ್ತು ವರ್ಷಗಳ ನಂತರ ಈಗ ಮತ್ತೊಮ್ಮೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಐರ್ಲೆಂಡ್ ಮ್ಲಾನ ವದನದಿಂದ ನಿಂತಿದೆ.


ಈ ನಡುವೆ ಪ್ರತಿ ವರ್ಷವೂ ಇಂಗ್ಲೆಂಡ್‌ನ ಗರ್ಭಪಾತ ಕ್ಲಿನಿಕ್‌ಗಳಲ್ಲಿ ಐರ್ಲೆಂಡ್ ಮಹಿಳೆಯರ ವಿಳಾಸಗಳು ಹೆಚ್ಚುತ್ತಲೇ ಇವೆ. ಗರ್ಭವನ್ನು ತೆಗೆಸಿಕೊಳ್ಳಲಿಕ್ಕಾಗಿಯೇ ಪ್ರತಿ ವರ್ಷ ನೂರಾರು ಐರಿಷ್ ಮಹಿಳೆಯರು ಇಂಗ್ಲೆಂಡ್ ಮತ್ತು ನೆದರ್ಲಂಡ್‌ಗೆ ಬರುತ್ತಿದ್ದಾರೆ. ಆದರೆ, ಇದೆಲ್ಲ ಉಳ್ಳವರ ಹಕ್ಕು ಸಾಧನೆ. ಎಲ್ಲ ನೆಲದಲ್ಲೂ ದುರ್ಬಲರ ದನಿಗಳು ಕ್ಷೀಣವಾಗಿಯೇ ಇರುತ್ತವೆ.

ತಾಯಿಯ ಜೀವಕ್ಕೆ ಅಪಾಯ ಇರುವ ಸಂದರ್ಭಗಳಲ್ಲಿ ಗರ್ಭಪಾತಕ್ಕೆ ಅವಕಾಶ ಕಲ್ಪಿಸುವ ಸಾಂವಿಧಾನಿಕ ಹಕ್ಕನ್ನು ಜಾರಿಗೆ ತರುವಲ್ಲಿ ಐರ್ಲೆಂಡ್ ಸರ್ಕಾರ ತನ್ನ ಬದ್ಧತೆಯನ್ನು ವ್ಯಕ್ತಪಡಿಸಿಲ್ಲ. ಸಂವಿಧಾನ ಕಲ್ಪಿಸಿರುವ ಹಕ್ಕಿನ ಅನುಷ್ಠಾನದ ಸಾಧ್ಯತೆಗಳ ಕುರಿತು ಸಲಹೆ ನೀಡುವಂತೆ 14 ಸದಸ್ಯರ ತಜ್ಞ ತಂಡವನ್ನು ಸರ್ಕಾರ 2010ರಲ್ಲಿ ನೇಮಿಸಿದೆ. ಆದರೆ ಈವರೆಗೆ ವರದಿ ಸಲ್ಲಿಕೆಯಾಗಿಲ್ಲ. ಸವಿತಾ ಅವರ ಸಾವಿನ ಪ್ರಕರಣದ ಬಳಿಕವಾದರೂ ಆ ವರದಿಗೆ ಜೀವ ಬರಬಹುದೆ?

ಸೂತಕದ ನಡುವೆಯೂ ಸಮಾಧಾನ ಹುಟ್ಟಿಸುವ ಸಂಗತಿಯೆಂದರೆ ಜಗತ್ತಿನ ವಿವಿಧ ಭಾಗಗಳಲ್ಲಿ ಸವಿತಾ ಅವರ ಸಾವಿನ ಕುರಿತಂತೆ ಪ್ರತಿಭಟನೆಗಳು ವ್ಯಕ್ತವಾಗಿರುವುದು. ಜೀವವಿರೋಧಿ ಗರ್ಭಪಾತ ಕಾನೂನಿನ ಬಗ್ಗೆ ಐರ್ಲೆಂಡ್‌ನಲ್ಲಿಯೇ ವಿರೋಧದ ದನಿಗಳು ಗಟ್ಟಿಯಾಗಿ ಕೇಳಿಸಿವೆ. ಅಲ್ಲಿನ ಉಪ ಪ್ರಧಾನಿ ಎಮಾಮ್ ಗಿಲ್‌ಮೋರ್ ಅವರು ಗರ್ಭಪಾತಕ್ಕೆ ಸಂಬಂಧಿಸಿದಂತೆ ಕಾನೂನಿನಲ್ಲಿ ಸ್ಪಷ್ಟತೆಯನ್ನು ತರುವ ಇಂಗಿತ ವ್ಯಕ್ತಪಡಿಸಿದ್ದಾರೆ.

‘ನಾಗರಿಕತೆ ಹಾಗೂ ಅಭಿವೃದ್ಧಿಯ ವಿಷಯದಲ್ಲಿ ನಾವು ಮುಂದೆ’ ಎನ್ನುವ ಯೂರೋಪ್ ಮನಸ್ಥಿತಿಯಲ್ಲಿನ ಟೊಳ್ಳನ್ನು ಸವಿತಾ ಪ್ರಕರಣ ಬೆಳಕಿಗೆ ತಂದಿದೆ. ಬೇರೆ ಧರ್ಮದವರಿಗೆ ರಕ್ತ ಕೊಡುವುದಕ್ಕೂ ತೆಗೆದುಕೊಳ್ಳುವುದಕ್ಕೂ ನಿಷೇಧ ಇರುವ ಧಾರ್ಮಿಕ ಕಟ್ಟುಪಾಡುಗಳೂ ಕೆಲವೆಡೆ ಇವೆ. ಇಂಥ ಕರ್ಮಠ ಆಚರಣೆಗಳಿಂದ ಹೊರಬರಲು ಈ ಸಾವು ಮುನ್ನುಡಿ ಆಗಬೇಕು.

■ ರಘುನಾಥ ಚ.ಹ.



ಗಣೇಶ್ ಅರಳೀಕಟ್ಟೆ